ISSN:3048-7137

# ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind)
ಮತ್ತು ದಟ್ಟೋದು (Peer Review)
ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ
ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly
Research Journal
Volume-2, Number-3, July-September 2025
https://aray.in/

ಪುಟ/Pages : 130
ಹಕ್ಕು/@: ಪ್ರಕಾಶಕರು
ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು
**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೭೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | **4-25** |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | **26-49** |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | **50-67** |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | **68-78** |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | **79-87** |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | **88-99** |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | **100-117** |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | **118-130** |

ISSN : 3048-7137

# ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ

ಹುಲುಗಪ್ಪ ಎನ್.ಎಚ್

**ಸೂಚಕ ಪದಗಳು**

ಬಯಲಾಟ, ಕನ್ನಡ ಜನಪದ ಕಲೆ, ಜಾನಪದ ರಂಗಭೂಮಿ, ಸಮಷ್ಠಿಕಲೆ

**ಸಾರಲೇಖ**: ಕನ್ನಡ ಬಯಲಾಟವು ಗ್ರಾಮೀಣ ಜನಪದ ಕಲೆಯ ಉತ್ಕೃಷ್ಟ ರೂಪವಾಗಿದ್ದು, ಸಾಹಿತ್ಯ, ಸಂಗೀತ, ನೃತ್ಯಗಳನ್ನು ಒಳಗೊಂಡ ಸಮಷ್ಠಿಕಲೆಯಾಗಿದೆ. ಭತ್ತದ ಸುಗ್ಗಿ ಮುಗಿದ ನಂತರ ಹಬ್ಬಗಳು, ಜಾತ್ರೆ ಹಾಗೂ ಹಳ್ಳಿಯ ಜೀವನದ ಸಂದರ್ಭಗಳು ಈ ಬಯಲಾಟಗಳಿಗೆ ಪ್ರೇರಣೆಯನ್ನು ನೀಡುತ್ತವೆ. ವಸ್ತುಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳು ಮತ್ತು ಐತಿಹಾಸಿಕ, ಸಾಮಾಜಿಕ ಘಟನೆಗಳ ಪ್ರಭಾವ ಕಾಣಿಸುತ್ತದೆ. ಬಯಲಾಟದ ಪ್ರಾಚೀನತೆಯ ಕುರಿತು ವಿಭಿನ್ನ ಅಭಿಪ್ರಾಯಗಳಿವೆ: ಕೆಲವರು ದ್ರಾವಿಡ ಮೂಲದ ಎಂದು ಹೇಳುವರು, ಕೆಲವರು ಇತ್ತೀಚಿನ 140–150 ವರ್ಷಗಳಲ್ಲಿ ರೂಪುಗೊಂಡವು ಎಂದು ಪರಿಗಣಿಸುತ್ತಾರೆ. ಇದರ ಮೇಲೆ ಬೇರೆ ಕಲಾಪ್ರಕಾರಗಳಾದ ಪಗರಣ, ಸಣ್ಣಾಟ, ಗೊಂದಲಿಗರ ಕಥೆಗಳು ಹಾಗೂ ಭಾಗವತರ ನಾಟಕಪದ್ಧತಿಗಳ ಪ್ರೇರಣೆಯು ಸ್ಪಷ್ಟವಾಗಿದೆ. ಪಗರಣದ ಹಾಸ್ಯಪಾತ್ರಗಳು ಬಯಲಾಟದಲ್ಲಿ ನೇರವಾಗಿ ಪರಿಗಣಿಸಲ್ಪಟ್ಟಿದ್ದು, ಹಾಸ್ಯ ಮತ್ತು ಜನಪ್ರಿಯತೆ ನೀಡುವ ಪ್ರಮುಖ ಅಂಶವಾಗಿದೆ. ಬಯಲಾಟವು ಭಾರತೀಯ ಜನಪದ ರಂಗಭೂಮಿಯಲ್ಲಿನ ಸಾಂಸ್ಕೃತಿಕ ಸಂಪ್ರದಾಯವನ್ನು ಪ್ರತಿಬಿಂಬಿಸುತ್ತದೆ ಮತ್ತು ವಿವಿಧ ಕಲಾಪ್ರಭಾವಗಳ ಮಿಶ್ರಣದ ಫಲವಾಗಿದೆ.

ಬಯಲಾಟ ಕರ್ನಾಟಕ ಜನಪದ ಕಲೆಗಳಲ್ಲಿ ಅತ್ಯಂತ ಉತ್ಕೃಷ್ಟವೂ ಹಾಗೂ ವೈವಿಧ್ಯದಿಂದ ಕೂಡಿದ್ದು, ಗಂಡುಕಲೆ ಎಂಬ ಅಭಿದಾನಕ್ಕೆ ಪಾತ್ರವಾಗಿದೆ. ಬಯಲಾಟವು ಗ್ರಾಮ್ಯ ಜನರಿಗೆ ಮನರಂಜನೆಯನ್ನು ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿಕಲೆಯಾಗಿದೆ. ಬಯಲಾಟವು ಸಾಹಿತ್ಯ, ಸಂಗೀತ, ನೃತ್ಯಗಳೊಂದಿಗೆ ಮುಪ್ಪುರಿಗೊಂಡಿರುವುದರಿಂದ ಇದನ್ನು ಸಮಷ್ಠಿಕಲೆ ಎಂದು ಕರೆಯುವುದಿದೆ. ಸಾಮಾನ್ಯವಾಗಿ ಭತ್ತದ ಸುಗ್ಗಿ ಕೆಲಸ ಮುಗಿದ ಮೇಲೆ ಈ ಬಯಲಾಟಗಳ ಸುಗ್ಗಿ ಪ್ರಾರಂಭವಾಗುತ್ತವೆ. ಇದಕ್ಕೆ ಮುಖ್ಯ ಕಾರಣ ಕೆಲಸದ ಬಿಡುವು ಎಂದು ಹೇಳಬೇಕಾಗುತ್ತದೆ. ಈ ಬಯಲಾಟಗಳಿಗೆ ರಾಮಾಯಣ, ಮಹಾಭಾರತ ಮತ್ತು ಭಾಗವತ ಪುರಾಣಗಳಿಂದ ವಸ್ತುವನ್ನು ಸ್ವೀಕರಿಸಿರುವಂತೆಯೇ ಐತಿಹಾಸಿಕ, ಸಾಮಾಜಿಕ ಹಾಗೂ ಕೌಟುಂಬಿಕ ಘಟನೆಗಳಂತಹ ವಸ್ತುವನ್ನಾಯ್ದುಕೊಂಡು ಬಯಲಾಟ ಕಥೆಗಳನ್ನು ರೂಪಿಸಲಾಗಿದೆ. ಇಂತಹ ಸಮಷ್ಠಿಕಲೆಯ ಪರಿಸರ ಮತ್ತು ಪ್ರೇರಣೆಯನ್ನು ಕುರಿತು ಮುಂದೆ ನೋಡಬಹುದಾಗಿದೆ.

ಕನ್ನಡ ಬಯಲಾಟದ ಪ್ರಾಚೀನತೆಯನ್ನು ಗ್ರೀಕ್‌ಮೂಲದಲ್ಲಿ ಹುಡುಕಲು ಪ್ರಯತ್ನಿಸಿರುವುದು ಕಂಡುಬಂದಿದೆ. "ಬಯಲಾಟದಲ್ಲಿ ದೇವತಾ ಪಾತ್ರಗಳು ಅಟ್ಟದೊಳಗಿಂದ ಪ್ರವೇಶಿಸಿದರೆ, ರಾಕ್ಷಸ ಇಲ್ಲವೇ ಖಳನಾಯಕ ಪಾತ್ರಗಳು ಹೊರಗಡೆಯಿಂದ ಆರ್ಭಟಿಸುತ್ತ ಅಟ್ಟದ ಮೇಲೆ ಪ್ರವೇಶಿಸುತ್ತವೆ. ದೇವತಾ ಪಾತ್ರಗಳು ಎಂದು ಕೂಡಾ ಸಭಿಕರಿಗೆ ತಮ್ಮ ಬೆನ್ನು ತೋರಿಸುವುದಿಲ್ಲ. ಇದು ಬಯಲಾಟದ ಸಂಪ್ರದಾಯ. ಈ ಸಂಪ್ರದಾಯವು ಗ್ರೀಕ್ ನಾಟಕದ ದೇವತೆಗಳ ಪ್ರವೇಶ–ನಿರ್ಗಮನಗಳನ್ನು ಹೋಲುತ್ತದೆ. ಆದ್ದರಿಂದಲೇ ಈ ಬಯಲಾಟಗಳು ಗ್ರೀಕರಿಂದ ಬಳುವಳಿಯಾಗಿ ಬಂದಿರಬೇಕು ಎನಿಸುತ್ತದೆ"[1] ಎಂಬ ಮಾತಿದೆ. ಕ್ರಿ.ಶ. ಆರಂಭದ ಪ್ರಾಚೀನ ಕರ್ನಾಟಕವು ಗ್ರೀಕರೊಂದಿಗೆ ವ್ಯಾಪಾರ ಸಂಬಂಧವಿಟ್ಟುಕೊಂಡದ್ದು ಕೆಲವು ಗ್ರೀಕ್ ನಾಟಕಗಳಲ್ಲಿ ಸಿಕ್ಕಿರುವ ಕನ್ನಡ ಪದಗಳಿಂದ ತಿಳಿದುಬರುತ್ತದೆ. ಇದೊಂದನ್ನು ಬಿಟ್ಟರೆ ಈ ವಿಚಾರವಾಗಿ ಮತ್ತೆ ಯಾವ ಆಧಾರಗಳು ಲಭ್ಯವಿಲ್ಲ. ಈ ಸಂಪರ್ಕದ ವ್ಯಾಪಾರವೊಂದನ್ನು ಬಿಟ್ಟು ಮತ್ಯಾವ ಸ್ಪಷ್ಟ ಆಧಾರವೂ ಇಲ್ಲದೆ ಕನ್ನಡ ಬಯಲಾಟವನ್ನು ಗ್ರೀಕರ ಬಳುವಳಿ ಎಂದು ಭಾವಿಸುವುದು ಬರೀ ಊಹೆಯಾಗಿಯೇ ಉಳಿಯುತ್ತದೆ. ಮುಖ್ಯವಾಗಿ ಇಲ್ಲಿನ ಪಾತ್ರಗಳ ಪ್ರವೇಶ ನಿರ್ಗಮನಗಳಲ್ಲಿರುವ ಸಾಮ್ಯತೆಯನ್ನು ಆಕಸ್ಮಿಕವೆಂದು ಭಾವಿಸಬೇಕಾಗುತ್ತದೆ. ಪ್ರವೇಶ ನಿರ್ಗಮನಗಳಲ್ಲಿರುವ ಒಂದಂಶವನ್ನು ಬಿಟ್ಟರೆ ಮಿಕ್ಕವುಗಳ ವಿಚಾರದಲ್ಲಿ ಗ್ರೀಕ್ ಮತ್ತು ನಮ್ಮ ಬಯಲಾಟದ ನಡುವಿನ ವ್ಯತ್ಯಾಸ

ISSN : 3048-7137

ಅಜಗಜಾಂತರವಾದುದು. ಬಯಲಾಟವೊಂದೆ ಅಲ್ಲ ನಮ್ಮ ಇಡೀ ದೇಶದ ಜನಪದ ರಂಗಭೂಮಿ ಬೇರೆ ಯಾವುದೇ ರಾಷ್ಟ್ರಗಳ ಪ್ರಭಾವದಿಂದ ಬಂದದ್ದಲ್ಲ. "ಭಾರತೀಯ ರಂಗಭೂಮಿ ಭಾರತೀಯ ಜೀವನ ವಿಧಾನದಿಂದಲೇ ಮೂಡಿ ಬಂದ ಅಪ್ಪಟ ಬೆಳವಣಿಗೆ"[2] ಎಂಬ ಶ್ರೀರಂಗರ ಮಾತು ಸ್ವಾಗತಾರ್ಹವಾದುದು.

ಡಾ. ಎಂ.ಎಸ್. ಸುಂಕಾಪುರರು ಬಯಲಾಟವು ಮೂಲತಃ ದ್ರಾವಿಡರ ಬಳುವಳಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯದ ಹೇಳಿಕೆಗಳು ಈ ರೀತಿಯಿವೆ. "ಬಯಲಾಟದ ರಂಗಭೂಮಿ ಗ್ರೀಕ್ ರಂಗಭೂಮಿಯನ್ನು ಹೋಲುವುದರಿಂದಲೂ ಈ ಬಗೆಯ ಆಟಗಳು ಕೂಚಿಪುಡಿ, ನಾಮನಾಟಂ ಮೊದಲಾದ ಹೆಸರಿನಲ್ಲಿ ತಮಿಳು, ಮಲೆಯಾಳಂ, ಆಂಧ್ರ, ಕರ್ನಾಟಕ, ದ್ರಾವಿಡ ಪ್ರದೇಶದಲ್ಲಿ ಪ್ರಚಾರವಾಗುವುದರಿಂದಲೂ ಬಯಲಾಟ ದ್ರಾವಿಡರ ಬಳುವಳಿಯೆಂಬುದು ಸ್ಪಷ್ಟವಾಗುತ್ತದೆ. ಉತ್ತರ ಭಾರತದಲ್ಲಿ ಈ ಬಗೆಯ ಆಟಗಳಿಲ್ಲ"[3] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ನಟುವರು ಎಂಬುವರು ದ್ರಾವಿಡ ಜನಾಂಗಕ್ಕೆ ಸೇರಿದವರು. ಹಾಡಿ ಕುಣಿಯುವುದು, ಕುಣಿಯುತ್ತಲೇ ನಟನೆ ಮಾಡುವುದು ಈ ಜನಾಂಗದ ವೈಶಿಷ್ಟ್ಯ. ಆದ್ದರಿಂದಲೇ ಆಟದ ಕಲ್ಪನೆ ದ್ರಾವಿಡರಿಂದ ಮೂಡಿಬಂದಿತೆಂದು ತರ್ಕಿಸಬಹುದೆಂದಿದ್ದಾರೆ."[4] "ಬಯಲಾಟ ಮಾತ್ರ ದ್ರಾವಿಡರದ್ದೇ ಎನ್ನುವುದು ಸುಳ್ಳಲ್ಲ, ಅದು ದ್ರಾವಿಡರ ಬಳುವಳಿ"[5] ಎಂಬ ಅಭಿಪ್ರಾಯವಿದೆ. ಇಲ್ಲಿನ ಹೇಳಿಕೆಗಳನ್ನು ಗಮನಿಸಿದಾಗ ಬಯಲಾಟವು ದ್ರಾವಿಡರದ್ದೆ ಎಂಬ ಅಭಿಪ್ರಾಯವನ್ನು ಬಲವಾಗಿ ಒಪ್ಪಿ ಕೊಂಡಂತಿದೆ. ಆದರೆ ಮತ್ತೊಂದು ರೀತಿಯ ಅಭಿಪ್ರಾಯ ಈ ರೀತಿಯಿದೆ. "ಇಂದು ರಂಗದ ಮೇಲೆ ಪ್ರದರ್ಶಿತವಾಗುತ್ತಲಿರುವ ಬಯಲಾಟಗಳಲ್ಲಿ ತೀರ ಹಳೆಯವೆನಿಸಿಕೊಳ್ಳುವ ಬಯಲಾಟಗಳಿಗೂ 140–150 ವರ್ಷಗಳಿಗಿಂತ ಹೆಚ್ಚಿನ ಪ್ರಾಚೀನತೆಯ ಬಲವಿಲ್ಲ"[6] ಎಂಬ ಮಾತನ್ನು ಬೆಟಗೇರಿ ಕೃಷ್ಣಶರ್ಮರು ಅಭಿಪ್ರಾಯಿಸಿದ್ದಾರೆ. ಇಲ್ಲಿನ ಅಭಿಪ್ರಾಯವನ್ನು ಗಮನಿಸಿದಾಗ ಬಯಲಾಟದ ಪ್ರಾಚೀನತೆಯನ್ನು ದ್ರಾವಿಡ ಮೂಲದ್ದು ಎಂದು ಹೇಳುವುದು ಅಷ್ಟೊಂದು ಸಮಂಜಸವಾಗಲಾರದು. ಕೂಚುಪುಡಿ, ನಾಮನಾಟಂ ಮೊದಲಾದಂತೆ ಹೇಳಿರುವ ಬಯಲಾಟಗಳೂ ಮತ್ತು ನಮ್ಮಲ್ಲಿನ ಬಯಲಾಟಗಳು ಒಂದೇ ರೀತಿಯಲ್ಲಿರಲು ಸಾಧ್ಯವಿಲ್ಲ. ಹಾಗೆ ನೋಡಿದರೆ ಬಯಲಾಟಕ್ಕೆ ಆಯಾಪ್ರದೇಶಕ್ಕೆ ತಕ್ಕಂತೆ ಅವರೇ ಇಟ್ಟುಕೊಂಡ ಬೇರೆ ಬೇರೆ ಹೆಸರು ಅಷ್ಟೇ. ಇಷ್ಟಾದರೂ ಕೆಲವು ಸಮಾನಾಂತರ ಅಂಶಗಳಿದ್ದು, ಅದು ಆಕಸ್ಮಿಕವಾಗಿರುವ ಸಾಧ್ಯತೆಯಿದೆ.

ಇನ್ನು ಮುಂದುವರಿದು ನೋಡುವುದಾದರೆ ಉತ್ತರ ಭಾರತದಲ್ಲಿಯೂ ಬಯಲಾಟಗಳಿದ್ದವು ಎಂಬ ಅಭಿಪ್ರಾಯವಿದೆ. “ಉತ್ತರ ಭಾರತದಲ್ಲಿ ನಮ್ಮಂಥ ಬಯಲಾಟಗಳಿದ್ದರಿಂದ ಅವು ದ್ರಾವಿಡರ ಸೃಷ್ಟಿ ಎಂದು ಹೇಳುವುದು ತರ್ಕವಿಲ್ಲದ ವಾದವಾಗುತ್ತದೆ. ನಮ್ಮಂಥವೇ ಬಯಲಾಟಗಳು ಉತ್ತರ ಭಾರತದಲ್ಲಿ ಯಾಕೆ ಇರಬೇಕು? ಪ್ರಾದೇಶಿಕ ಭಿನ್ನತೆ, ಪರಿಸರ ಇರಲೇಬಾರದೇ? ಭಾರತದ ಬಯಲಾಟಗಳಾದ ಯಕ್ಷಗಾನ, ತಮಾಶಾ, ಭಾಮಾಕಲಾಪ, ಕೂಚುಪುಡಿ, ಜಾತ್ರಾ ಮೊದಲಾದವೆಲ್ಲವೂ ಮಧ್ಯಯುಗದಿಂದಾಚೆ ಜನಿಸಿರುವಂಥವು. ಕ್ರಿ.ಶ. 16ನೆಯ ಶತಮಾನಕ್ಕೆ ಹಿಂದೆ ಇವುಗಳ ಪ್ರಾಚೀನತೆಯ ಗಡಿ ದಾಟಲಾರದು.”[7] ಇಲ್ಲಿನ ಮಾತು ಇಡೀ ಭಾರತೀಯ ಜಾನಪದ ರಂಗಭೂಮಿಗೆ ಅನ್ವಯಿಸುವುದರಿಂದ, ಇದಕ್ಕೆ ಕನ್ನಡ ಬಯಲಾಟವೇನೂ ಹೊರತಲ್ಲ. ಇಲ್ಲಿನ ವಿಚಾರಗಳನ್ನು ಗಮನಿಸಿದರೆ ಉತ್ತರದ ಬಯಲಾಟಕ್ಕಿಂತ ನಮ್ಮದು ಪ್ರಾಚೀನದ್ದು ಎಂದು ಹೇಳುವುದಾಗಲಿ, ಅದೇ ಆಧಾರದ ಮೇಲೆ ಬಯಲಾಟವು ದ್ರಾವಿಡ ಮೂಲದ್ದು ಎಂದು ಹೇಳುವುದಾಗಲಿ ಒಪ್ಪತಕ್ಕ ಮಾತಲ್ಲ.

ಆರ್ಯರು ಮತ್ತು ದ್ರಾವಿಡರ ನಡುವೆ ಕ್ರಿ.ಶ. ಆರಂಭದಲ್ಲಿ ಸಾಮರಸ್ಯರೂಪ ಪಡೆದಿತ್ತು. ಈಗಿನ ಸಂದರ್ಭದಲ್ಲಿ ಈ ಎರಡು ಸಂಸ್ಕೃತಿಗಳು ಎಷ್ಟರಮಟ್ಟಿಗೆ ಬೆರೆತುಕೊಂಡಿವೆಯೆಂದರೆ, ಸದ್ಯಕ್ಕೆ ಕೆಲವೊಂದು ವಿಚಾರಗಳಲ್ಲಿ ಅವುಗಳನ್ನು ಬೇರ್ಪಡಿಸಿ ನೋಡುವುದಕ್ಕೆ ಸಾಧ್ಯವಲ್ಲದ ಪರಿಸ್ಥಿತಿಯನ್ನು ತಂದೊಡ್ಡಿವೆ. ಇಲ್ಲಿ ಕನ್ನಡಿಗರು ಮೂಲತಃ ದ್ರಾವಿಡರು ನಿಜ. ಹಾಗೆಂದ ಮಾತ್ರಕ್ಕೆ ನಮ್ಮ ಬಯಲಾಟವು ದ್ರಾವಿಡ ಮೂಲದ್ದು ಎಂದು ಹೇಳಲಾದಿತೆ. “ಕನ್ನಡಿಗರ ಇಂದಿನ ಸಂಸ್ಕೃತಿಯನ್ನು ದ್ರಾವಿಡವೇ, ಆರ್ಯವೇ ಎಂದು ಗೆರೆಕೊರೆದು ಹೇಳಲು ಆದಿತೇ.....? ಅಂದಾಗ ಕೇವಲ 150 ವರ್ಷಗಳ ಹಿಂದೆ ಯಾವ ಅಸ್ತಿತ್ವವನ್ನು ಪಡೆದಿರಲಾರದ ನಮ್ಮ ಬಯಲಾಟವು ದ್ರಾವಿಡರ ಬಳುವಳಿಯೆಂದು ಹೇಳುವುದು ಬರೀ ಊಹೆ ಯಾಗಿದೆ. ನಟುವರು ದ್ರಾವಿಡರು ಅವರಿಂದಲೇ ಹುಟ್ಟಿಕೊಂಡ ಬಯಲಾಟವೂ ಕೂಡಾ ದ್ರಾವಿಡರದ್ದು ಎಂದು ಹೇಳುವ ಮಾತು ಸಮಂಜಸವಾಗಿಲ್ಲ”[8] ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕುಣಿತವನ್ನು ಅದೂ ಕೂಡಾ ಶಾಸ್ತ್ರೀಯ ಕುಣಿತವನ್ನು ವಂಶಪಾರಂಪರ್ಯವಾಗಿ ಆಶ್ರಯಿಸಿಕೊಂಡು ಬಂದವರಿಗೆ ನಟುವರು ಎಂದು ನಮ್ಮ ಕನ್ನಡ ನಾಡಿನವರು ಕರೆದಿದ್ದಾರೆ. ಇದೊಂದರಿಂದಾಗಿಯೇ ನೃತ್ಯಗಾರರು ಬರೀ ನಮ್ಮ ಕನ್ನಡ ನಾಡಿನವರೇ, ಬೇರೆಡೆ ಇಲ್ಲವೇ ಇಲ್ಲ ಎಂದು ಖಡಾಖಂಡಿತವಾಗಿ ಹೇಳೋದಕ್ಕಾಗದು.

ISSN : 3048-7137

ರಾಜರ ಆಶ್ರಯದಲ್ಲಿದ್ದುಕೊಂಡು ರಾಜಮಹಾರಾಜ, ಶ್ರೀಮಂತವರ್ಗವನ್ನು ತಮ್ಮ ಕಲೆಯ ಮೂಲಕ ತೃಪ್ತಿಗೊಳಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಈ ನಟುವರು ಜಾನಪದ ಕಲೆಗಳತ್ತ ಕಣ್ಣು ಹಾಯಿಸಿರುವಂತೆ ಕಾಣುತ್ತಿಲ್ಲ. ಒಂದು ರೀತಿಯಲ್ಲಿ ಬಯಲಾಟದ ಹುಟ್ಟಿಗೆ ಕುಣಿತಗಳು ಪ್ರೇರಣೆಯನ್ನು ಒದಗಿಸಿರುವುದು ಸ್ಪಷ್ಟ. ಆದರೆ ಇಲ್ಲಿನ ನಟುವರ ಮಾರ್ಗ ನೃತ್ಯಗಳಲ್ಲ. ಅದರ ಬದಲಿಗೆ ಜಾನಪದ ನೃತ್ಯಗಳು ಪ್ರೇರಣೆಯನ್ನು ಒದಗಿಸಿವೆಂಬುದು ಸ್ಪಷ್ಟವಾಗುತ್ತದೆ.

ಬಯಲಾಟಗಳ ಪ್ರಾಚೀನತೆಯು 150 ವರ್ಷಗಳಿಗಿಂತ ಹೆಚ್ಚಿನ ಹಿಂದೆ ಸರಿಯುವುದಿಲ್ಲ. ಆದರೆ ಪ್ರಾಚೀನ ಕರ್ನಾಟಕದಲ್ಲಿ ಜಾನಪದ ರಂಗಭೂಮಿಯು ತನ್ನ ಅಸ್ತಿತ್ವವನ್ನು ಪಡೆದುಕೊಂಡಿತ್ತೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಅವುಗಳ ಪ್ರದರ್ಶನ ವಿಧಾನ, ಸ್ವರೂಪ, ಸಾಹಿತ್ಯ ಸಂಗೀತಗಳ ಉಪಯೋಗ ಮೊದಲಾದ ವಿಷಯಗಳು ಇದಕ್ಕೆ ಸಾಕ್ಷಿಯಾಗಿವೆ. "ಮೂಕ ನಾಟಕಗಳ, ಬೊಂಬೆಯಾಟಗಳ ಉಲ್ಲೇಖಗಳು 13ನೇ ಶತಮಾನದ ಗ್ರಂಥಗಳಲ್ಲಿ ಬರುವುದರಿಂದ ಜನಸಾಮಾನ್ಯರಿಗೆ ರಚಿಸುವ ನಾಟಕರಂಗವಿತ್ತೆಂದು ಸಿದ್ಧವಾಗುವುದು. ಜೊತೆಜೊತೆಗೆ ಬಯಲಾಟಗಳು ಇರುತ್ತಿದ್ದವು. ಇತಿಹಾಸ, ಪುರಾಣಗಳ ಆಧಾರದ ಮೇಲೆ ರಚಿತವಾದ ಜನಪ್ರಿಯ ಆಟಗಳು ಸರ್ವಸಾಮಾನ್ಯ ಲಕ್ಷಣಗಳಾಗಿದ್ದವು. ಇವುಗಳಲ್ಲಿ ಸಂಗೀತ, ಸಾಹಿತ್ಯ, ನೃತ್ಯ, ಸಂಭಾಷಣೆ ಇವೆಲ್ಲ ಸಮಾವೇಶ ಗೊಂಡಿರುತ್ತಿದ್ದವು."[9] ಈ ಹೇಳಿಕೆಯಲ್ಲಿ ಪೂರ್ವಾರ್ಧ ಸತ್ಯವಾಗಿದ್ದರೆ, ಉತ್ತರಾರ್ಧವು ಊಹೆಗೆ ಆಸ್ಪದವಿದೆ. ಇನ್ನು ಬಯಲಾಟಗಳು ಇತಿಹಾಸ, ಪುರಾಣಗಳನ್ನಾಧರಿಸಿ ರಚಿತವಾಗಿ, ಪ್ರಯೋಗಗೊಳ್ಳುತ್ತಿದ್ದುದರ ಬಗ್ಗೆ ಯಾವ ಕುರುಹುಗಳಿಲ್ಲ. ಹರಿಹರನು ತನ್ನ ಗಿರಿಜಾಕಲ್ಯಾಣವು ಗೌರೀಪತಿಯು ಕೇಳಿ ಆನಂದ ಪಡುವಂತದ್ದಲ್ಲ. "ನೀರ ಸರರಿವಂತೆ ನಿದು ತಾರೆಲೆಯೇ ಬೀದಿವಾಡೆ ನೆರವಿಯ ತರಮುಕೇ...? ಎಂದು ಪ್ರಶ್ನಿಸಿದ್ದಾನೆ."[10]

ಕುಮಾರವ್ಯಾಸನು ಜನಸಾಮಾನ್ಯರ ಒರಟು ಲಿಪಿಯ ರಂಗಪ್ರದರ್ಶನದ ಒಂದು ಪ್ರಕಾರ ಎಂಬ ಅರ್ಥದಲ್ಲಿ 'ನಾಡಾಡಿ ನಾಟಕ' ಎಂಬ ಪದವನ್ನು ಬಳಸಿದ್ದಾನೆ.

"ಖೇಡನಾದನ ಜಾತರಿಪು ಮಾ
ತಂಡಿಸಿದ ನಹಿಪತಿಯ ನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ"[11]

"ಈ ನಾಡಾಡಿಗಳ ನಾಟಕವಂತೂ ಕನ್ನಡವೇ ಆಗಿರಬೇಕು ಎಂಬುದು ಗೋವಿಂದ ಪೈಗಳ ಅಭಿಪ್ರಾಯ"[12] ಈ ಅಭಿಪ್ರಾಯವು ಒಪ್ಪುವಂತದ್ದಾಗಿದೆ. ಹಾಗೆಯೇ ಬಂಧುವರ್ಮನು ತನ್ನ 'ಜೀವಸಂಬೋಧನೆ'ಯಲ್ಲಿ "ವಿಧಾತ್ರನ ಗೊಡ್ಡಾಟ ನಾಡಿದುದಂ ಎಂದು ಗೊಡ್ಡಾಟ ಪದವನ್ನು ಪ್ರಯೋಗಿಸಿದ್ದಾನೆ."[13] ಹಾಗೆ ನೋಡಿದರೆ ಮರಳಾಟವು ಇಲ್ಲಿ ಬಳಕೆಯಾಗಿರುವ ಗೊಡ್ಡಾಟಕ್ಕೆ ಸಂವಾದಿಯಾಗಿರುವ ಸಾಧ್ಯತೆಯಿದೆ. ಹಾಗೆಯೇ ಶೂನ್ಯ ಸಂಪಾದನೆಯಲ್ಲಿ "ವಾದ್ಯ ಮೇಳಾಪಮಂ ಕಂಡು ಆಲಿಗೊಂಡು ನಗುತ್ತ ಹಸ್ತವನಾಡಿಸಿ ಗತಿಯನುಚ್ಚರಿಸಿ ಕೈಯೊಡನೆ ಮರುಳಾಟವನಾಡುತ್ತ"[14] ಎಂದು ವಿವರಿಸಲಾಗಿದೆ.

## ಪಗರಣ

ಪ್ರಾಚೀನ ಕಾಲದಿಂದಲೂ 'ಪಗರಣ'ವು ಗ್ರಾಮೀಣ ಕನ್ನಡಿಗರನ್ನು ರಂಜಿಸುತ್ತ ಬಂದಿದ್ದು, ಇಂದಿಗೂ ಜೀವಂತವಾಗಿರುವುದು ಅದರ ಜನಪ್ರಿಯತೆಯನ್ನು ತೋರಿಸುತ್ತದೆ. ಪ್ರಕರಣ ಎಂಬ ಸಂಸ್ಕೃತದ ರೂಪಕ ಪ್ರಕಾರವೇ ಕನ್ನಡದಲ್ಲಿ 'ಪಗರಣ'[ಹಗರಣ] ಆಗಿದೆಯೆಂಬುದು ಬಹುಜನರ ಅಭಿಪ್ರಾಯ. ಪ್ರಕರಣಕ್ಕೆ ಸಾಕಷ್ಟು ಲಕ್ಷಣಗಳನ್ನು ಧನಂಜಯ, ವಿಶ್ವನಾಥ ಮೊದಲಾದ ಸಂಸ್ಕೃತ ಲಾಕ್ಷಣಿಕರು ಗುರುತಿಸಿದ್ದಾರೆ. ಆದರೆ ನಮ್ಮಲ್ಲಿ ಕಂಡುಬಂದಿರುವ ಪಗರಣದ ಸರಿಯಾದ ಲಕ್ಷಣಗಳನ್ನು ಯಾರೂ ತಿಳಿಸಿದಂತಿಲ್ಲ. ಅದು ಸ್ವಚ್ಛಂದ ಕಲಾಪ್ರದರ್ಶನ, ಸಾಮಾಜಿಕ ವಸ್ತು, ಶೃಂಗಾರ ರಸದಂಥ ಪಾತ್ರಗಳು ಪಗರಣದಲ್ಲಿರುವುದಾದರೂ ಪಗರಣವೂ ಪ್ರಕರಣದಂತೆ ಲಿಖಿತ ಸಾಹಿತ್ಯರೂಪ ಪಡೆದಿಲ್ಲ. ಮತ್ತು ಸಂಯೋಜಿತವಾದ ರಂಗಪ್ರದರ್ಶನವಲ್ಲ. ಹಾಗೆ ನೋಡಿದರೆ "ಮಾಲತೀಮಾಧವ, ಮೃಚ್ಛಕಟಿಕ ಮೊದಲಾದ ಉತ್ಕೃಷ್ಟ ಕೃತಿಗಳೆಲ್ಲಿ; ಜನಸಾಮಾನ್ಯರ ಒರಟು, ಅಶ್ಲೀಲ ರಂಗಪ್ರದರ್ಶನವಾಗಿರುವ ಅಲಿಖಿತ ಪಗರಣಗಳೆಲ್ಲಿ....?."[15] ಎಂಬ ಮಾತಿದೆ. ಹಾಗೇ ನೋಡುವುದಾದರೆ ಮೃಚ್ಛಕಟಿಕ ರೂಪಕವು ಕನ್ನಡ ರಂಗಭೂಮಿಯ ಕೊಡುಗೆ ಎಂಬ ಮಾತಿದೆ. "ಸಂಸ್ಕೃತ ಭಾಷೆಯಲ್ಲಿ ಈ ಪ್ರಕರಣ ರೂಪಕಕ್ಕೆ ಲಕ್ಷ್ಯವನ್ನಾಗಿ ಹೇಳುವ ಶೂದ್ರಕ ಕವಿಯ 'ಮೃಚ್ಛಕಟಿಕ' ಎಂಬ ಕೃತಿಯನ್ನು ನೋಡಿದರೆ ಅದರಲ್ಲಿ ದಕ್ಷಿಣ ಭಾರತದ ಜನಜೀವನದ ಚಿತ್ರಣವಿದೆಯೇ ಹೊರತು ಉತ್ತರ ಭಾರತೀಯರದು ಎನಿಸುವುದಿಲ್ಲ. ಕವಿಯು ಕೂಡಾ ದಕ್ಷಿಣ ಭಾರತದವನೇ ಎಂದು ಹೇಳುವಂತಹ ಪ್ರಮಾಣಗಳು ಆತನ ರೂಪಕದಲ್ಲಿ ಸಿಗುವವು. ಅದುದರಿಂದ ಕನ್ನಡ ನಾಡಿನಲ್ಲಿ ಜನಸಾಮಾನ್ಯರು ಆಡುತ್ತಿದ್ದ ಕೃತಿ ಪದ್ಧತಿಯನ್ನೇ 'ಪ್ರಕರಣ' ಎಂದು ಹೆಸರಿಟ್ಟು

ISSN : 3048-7137

ಅವನು ಸಂಸ್ಕೃತ ರೂಪಕಗಳ ಗುಂಪಿನಲ್ಲಿ ಹೊಸ ವಿಭಾಗವೊಂದನ್ನು ಸೇರಿಸಿರಬಹುದೆಂದು ಊಹಿಸುವುದಕ್ಕೆ ಅವಕಾಶವಿದೆ"[16] ಎಂಬ ಮಾತು ಬರೀ ಕಲ್ಪನೆಯಾಗಿಯೇ ಉಳಿಯುತ್ತದೆ.

ಅಂದಿನ ಕನ್ನಡಿಗರು ಶೂದ್ರಕನ 'ಮೃಚ್ಛಕಟಿಕ'ಕ್ಕೆ ಪ್ರೇರಣೆಯನ್ನು ಒದಗಿಸುವಂಥ ಅದರೊಂದಿಗೆ ಸರಿಜೋಡಿಯಾಗಿ ನಿಲ್ಲಬಲ್ಲ ರಂಗಪ್ರಯೋಗ, ಸಂಪ್ರದಾಯ ಹೊಂದಿದ್ದರೆಂದು ಹೇಳಲು ಸರಿದೂಗಿಸುವ ಆಧಾರಗಳಿಲ್ಲ. ಆದ್ದರಿಂದ "ಪಗರಣ–ಪ್ರಕರಣಗಳನ್ನು ಒಂದೇ ಮಾನದಂಡದಿಂದ ಅಳೆಯುವುದು ಊಹೆಗೆ ಮೀರಿದ್ದು."[17] ಎಂಬ ಮಾತಿಗೆ ಬೆಂಬಲ ದೊರೆತಂತಾಗುತ್ತದೆ.

ಕಾವ್ಯದೋಷಗಳ ಬಗ್ಗೆ ಹೇಳುವಾಗ ಮಾರ್ಗಕಾರನು ಪಗರಣದ ಕುರಿತು ಈ ರೀತಿ ಹೇಳಿದ್ದಾನೆ.

ಮಿಗೆ ದುಷ್ಕರ ಕಾವ್ಯಂಗಳೊ
ಳಗಹಿತ ಪ್ರಾಯಮಕ್ಕುಮಾಶ್ರುತಿ ಕಷ್ಟಂ
ಪಗರಣದೊಳೊಳೆದು ಮೂರುಂ
ನಗಿಸುಗಗುಮಪ್ಪದರಿನಲ್ಲಿ ಗಂತವದೋಷಂ"[18]

ಕವಿರಾಜಮಾರ್ಗಕಾರನು 'ಪ್ರಕರಣದಂಥ' ಸಂಸ್ಕೃತದ ಶಿಷ್ಟರೂಪಕಕ್ಕೆ ಅನ್ವಯಿಸಿ ಹೇಳದೆ, ಕನ್ನಡದಲ್ಲಿನ ಜಾನಪದ ಪಗರಣವನ್ನು ಕುರಿತು ಹೇಳಿದ್ದಾನೆಂಬುದನ್ನು ಗಮನಿಸಬೇಕಾಗುತ್ತದೆ. ಹಾಗೆಯೇ ನಯಸೇನನ ಧರ್ಮಾಮೃತದಲ್ಲಿನ "ಪಗರಣಗರಂ ಕಂಡವರ್ನಗುವ ಅಲ್ಲದೆಯವರಾಟಕ್ಕೆ ಲಕ್ಷಣಮಂ ನೋಡರ"[19] ಎಂಬ ಮಾತು ಲಕ್ಷಣ ರಹಿತ ಪಗರಣದ ಕುರಿತು ತಿಳಿಸುತ್ತದೆಂಬುದು ಸ್ಪಷ್ಟವಾಗುತ್ತದೆ. ಹಾಗೆ ನೋಡುವುದಾದರೆ ಪಗರಣದ ವಿವರಣೆ ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯಲ್ಲಿಯೂ ಬಂದಿದೆ. ಇಲ್ಲಿಯೂ ಕೂಡಾ ಕನ್ನಡದಲ್ಲಿನ ಜಾನಪದ ಪಗರಣವನ್ನು ಕುರಿತದ್ದೆ ಎಂದು ಹೇಳಬೇಕಾಗುತ್ತದೆ.

"ಪಗರಣದ ಅಸಂಬದ್ಧ ನಿರೂಪಣೆ ಬೀದಿಯ ರಂಗಮಂಟಪ, ವಿಕೃತ ವೇಷಭೂಷಣಗಳೆಲ್ಲ ಅದನ್ನೊಂದು ಗೊಂದಲದ ಸಂತೆಯನ್ನಾಗಿ ಮಾಡಿದವು. ಪಗರಣದಲ್ಲಿ ಹೇಗಾದರೂ ಮಾಡಿ ನಗಿಸುವುದು ಮುಖ್ಯ ಉದ್ದೇಶವಾಗಿದ್ದರಿಂದ ಅದರಲ್ಲಿ ಅಶ್ಲೀಲಕ್ಕೆ ಸಾಕಷ್ಟು ಎಡೆಸಿಕ್ಕಿತು. ಹೀಗಾಗಿ ಪಗರಣವು ಸ್ತ್ರೀಯರು ಗೌರವಸ್ಥರು ನೋಡುವಂಥದ್ದಲ್ಲ ಎಂಬ ಅಭಿಪ್ರಾಯ ಬಲಗೊಂಡಿತು."[20] ಈ

ರೀತಿಯ ಅಭಿಪ್ರಾಯವಿದ್ದರೂ ಯಾವ ಅಡ್ಡಿ ಆತಂಕಗಳು ಇಲ್ಲದೆ ಪಗರಣ ತನ್ನದೇ ಆದ ಪರಂಪರೆ ಉಳಿಸಿಕೊಂಡು ಬಂದಿರುವುದನ್ನು ನೋಡಿದರೆ ಹಳ್ಳಿಗಾಡಿನವರಿಗೆ ಅದರ ಮೇಲಿರುವ ಶ್ರದ್ಧೆ ತಿಳಿಯುತ್ತದೆ. ಆದರೆ 'ಪಗರಣ'ದ ಅದೆಷ್ಟೋ ಅಂಶಗಳು ನಮ್ಮ ಬಯಲಾಟಗಳ ಒಡಲಲ್ಲಿವೆ. ಮುಖ್ಯವಾಗಿ ಬಯಲಾಟದ ಕಥೆ ಶಿಷ್ಟ ಸಾಹಿತ್ಯದಿಂದ ಎತ್ತಿಕೊಂಡಿರುವುದರಿಂದ ಅದು ನಿಶ್ಚಿತ ಮಾದರಿ ಕ್ರಮದಲ್ಲಿಯೇ ಸಾಗಬೇಕು. ಆದರೆ ಪಗರಣದಲ್ಲಿರುವಂತೆ ಕಥೆಯೊಂದಿಗೆ ಸಾವಯವ ಸಂಬಂಧ ಹೊಂದಿರುವ ಹಾಸ್ಯಮಯ ಸನ್ನಿವೇಶಗಳು ಬಯಲಾಟಗಳಲ್ಲಿ ಇಲ್ಲ. ಆದರೂ "ಪ್ರೇಕ್ಷಕರಿಗೆ ಹಾಸ್ಯ ರಸವನ್ನು ಉಣಿಸಲು ಅಡ್ಡಸೋಗುಗಳು ಪ್ರಾರಂಭದಲ್ಲಿರಲಿಲ್ಲ, ಅನಂತರದ ದಿನಗಳಲ್ಲಿ ಸೇರಿಕೊಂಡಿವೆ. ಈ ಬಯಲಾಟಗಳಲ್ಲಿನ ಅಡ್ಡಸೋಗುಗಳಿಗೂ ಪಗರಣದ ಪಾತ್ರಗಳಿಗೂ ಯಾವ ವ್ಯತ್ಯಾಸವಿಲ್ಲ. ಮುಖ್ಯವಾಗಿ ಬಯಲಾಟಗಳಲ್ಲಿ ಬೆರಳಿಟ್ಟು ತೋರಿಸುವ ಜಾನಪದೀಯ ಅಂಶಗಳೆಂದರೆ ಈ ಅಡಸೋಗುಗಳೇ. ಒಂದು ರೀತಿಯಲ್ಲಿ ಅಡಸೋಗುಗಳಿಲ್ಲದ ಬಯಲಾಟವು ಸಪ್ಪೆಯಾಗುತ್ತದೆ"[21] ಎಂಬ ಅಭಿಪ್ರಾಯವಿದೆ.

ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿರುವ ಪಗರಣವು ಮಾರುವೇಷದಿಂದ ಬಯಲಾಟದಲ್ಲಿ ತನ್ನ ಸ್ಥಾನವನ್ನು ಆಕ್ರಮಿಸಿ ಕೊಂಡಿದೆ. ಅದರಲ್ಲೂ ಮುಖ್ಯವಾಗಿ ಬಯಲಾಟದಲ್ಲಿನ ಹಾಸ್ಯಪಾತ್ರಗಳಾದ ಮಂತ್ರಿ, ಸಾರಥಿ, ಲಾಲ್ಯಾ ಮೊದಲಾದವು ಪಗರಣದ ಪಾತ್ರಗಳ ಪಡಿನೆಳಲುಗಳಾಗಿವೆ.

## ಬಯಲಾಟಕ್ಕೆ ಪ್ರೇರಣೆ

ಬಯಲಾಟಕ್ಕೆ ಕಲಾಪ್ರಕಾರಗಳು ವಿವಿಧ ರೀತಿಯಿಂದ ಪ್ರೇರಣೆಯನ್ನೊದಗಿಸಿ ಕೊಟ್ಟಿವೆ. ಅವುಗಳ ಪ್ರೇರಣೆಯನ್ನು ಮುಂದಿನಂತೆ ನೋಡಬಹುದಾಗಿದೆ. ಬಯಲಾಟಕ್ಕೆ ಸಂಬಂಧಿಸಿದಂತೆ ಪುರವಂತರು ಹಲವಾರು ವಿಧದಿಂದ ಪ್ರೇರಣೆಯನ್ನು ನೀಡಿದ್ದಾರೆ. "ರಂಗಕ್ಕೆ ಬೇಕಾಗುವ ನಾಟಕೋಚಿತ ಭಾಷೆ, ಹಿನ್ನೆಲೆಯ ವಾದ್ಯ, ಕುಣಿತ, ಅಂಗಾಭಿನಯ, ಭಾವಾಭಿನಯ, ಸಂದರ್ಭೋಚಿತ ಧ್ವನಿಯ ಏರಿಳಿತ ಮೊದಲಾದ ಎಲ್ಲಾ ಲಕ್ಷಣಗಳೂ ಈ ಪುರವಂತರಾಟ ದಲ್ಲಿರುವವು.'[22] ಹಾಗೆಯೇ ಬಯಲಾಟದ ಹಾಸ್ಯಪಾತ್ರಗಳ ಕಲ್ಪನೆಗೆ ಪುರವಂತ ರಲ್ಲಿನ ಹಾಸ್ಯಗಾರ ಚಾಲನೆ ಕೊಟ್ಟಿರಲು ಸಾಧ್ಯವಿದೆ. ಇಲ್ಲಿನ ಅಂಶಗಳ ಆಧಾರದ

ISSN : 3048-7137

ಮೇಲೆ ಪುರವಂತರ ಪ್ರಭಾವವನ್ನು ಬಯಲಾಟ ಒಳಗೊಂಡಿದ್ದರೆ ಅಚ್ಚರಿಪಡಬೇಕಾಗಿಲ್ಲ.

ಗೊಂದಲಿಗರ ಕಥೆಯು ಕೀರ್ತನಕಾರರ ಪರಂಪರೆಯ ಬೆಳವಣಿಗೆಯ ರೂಪವೆಂಬುದಿದೆ. "ಕೀರ್ತನದಲ್ಲಿ ಕಾಣದ ಪ್ರಾಸಂಗಿಕ ಸಂಭಾಷಣೆಗಳು ಗೊಂದಲಿಗರ ಕಥೆಯನ್ನು ಬಯಲಾಟಕ್ಕೆ ಹೆಚ್ಚು ಸಮೀಪ ತರುತ್ತವೆ. ವಿಶೇಷವಾಗಿ ಸಣ್ಣಾಟಗಳ ತರ್ಕಬದ್ಧ ಸಂಭಾಷಣೆಗಳಲ್ಲಿ ಈ ಗೊಂದಲಿಗರ ಆಟದ ವಿಧಾನಗಳನ್ನು ಗುರುತಿಸಬಹುದು."[23] ಮುಖ್ಯವಾಗಿ ಗೊಂದಲಿಗರ ಕಥೆ ಮನರಂಜನೆಯೊಂದಿಗೆ ನೀತಿಬೋಧನೆಯ ಉದ್ದೇಶವನ್ನಿಟ್ಟುಕೊಂಡಿದೆ. ನೀತಿ ಬೋಧನೆಯು ಸಣ್ಣಾಟಗಳ ಮುಖ್ಯ ವೈಶಿಷ್ಟ್ಯಗಳಲ್ಲಿ ಒಂದಾಗಿದ್ದು, ಈ ಅಂಶವು ಗೊಂದಲಿಗರ ಗಾಢವಾದ ಪ್ರಭಾವದಿಂದ ಬಂದಿದ್ದು ಎಂಬುದು ಮಾತ್ರ ಸತ್ಯ. ಗೊಂದಲಿಗರ ಕಥೆಗಳನ್ನು ಹೋಲುವ ಅದೆಷ್ಟೋ ಜಾನಪದ ಕಥೆಗಳು ಸಣ್ಣಾಟಕ್ಕೆ ವಸ್ತುವಾಗಿರುವುದರಿಂದ ಇವೆರಡರ ಸಾಮ್ಯತೆಯನ್ನು ಸೂಚಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ ಗೊಂದಲಿಗರ ಕಥೆಗಳು ಬಯಲಾಟದ ಅದರಲ್ಲೂ ವಿಶೇಷವಾಗಿ ಸಣ್ಣಾಟದ ಉಗಮಕ್ಕೆ ಪ್ರೋತ್ಸಾಹ, ಪ್ರೇರಣೆಯನ್ನು ಒದಗಿಸಿರುವುದು ಕಂಡುಬರುತ್ತದೆ. ಹಾಗೆಯೇ ಬಯಲಾಟದ ಕೆಲವು ಪಾತ್ರಗಳ ವೇಷಭೂಷಣಗಳಲ್ಲಿ, ಕುಣಿತದಲ್ಲಿ, ಹಾಡುಗಳ ಸಂಯೋಜನೆಯಲ್ಲಿ ವೇಷಗಾರರ ಪ್ರೇರಣೆ ಪ್ರಭಾವಗಳನ್ನು ಗುರುತಿಸಬಹುದಾಗಿದೆ. ಸೋಮಶೇಖರ ಇಮ್ರಾಪೂರರು "ವೇಷಗಾರರ ಸಂಘಟನೆಯಲ್ಲಿಯೇ ಈ ಬಯಲಾಟಗಳು ಹುಟ್ಟಿಕೊಂಡಿವೆ"[24] ಎಂದು ಹೇಳಿರುವುದು ವೇಷಗಾರರ ಪ್ರಭಾವ ಬಯಲಾಟದ ಮೇಲಾಗಿರುವುದನ್ನು ಗಟ್ಟಿಗೊಳಿಸುತ್ತದೆ.

ಕೀರ್ತನಕಾರರು ಭಕ್ತಿ ಪ್ರಚಾರವನ್ನು ಧ್ಯೇಯವಾಗಿಟ್ಟುಕೊಂಡಿದ್ದು, ಯಾವ ಸಂಕೋಚವಿಲ್ಲದೆ ಜನಸಾಮಾನ್ಯರ ಮನೆಯ ಬಾಗಿಲಿಗೆ ಬರುವಂತಗಿಸಿತು. ಅಭಿನಯ, ಹಾಡುಗಳ ಮೂಲಕ ನವರಸ ಭರಿತವಾಗಿ ಹಾಸ್ಯದೊಡನೆ ಸಾಗುವ ಕಥೆ ಜನರನ್ನು ತನ್ನಡೆಗೆ ಆಕರ್ಷಿಸುತ್ತದೆ. ಈ ಭಾಗವತರಲ್ಲಿನ ಸಂಭಾಷಣೆಗಳಿಗೆ ಮತ್ತಷ್ಟನ್ನು ಸೇರಿಸಿ ಆಯಾ ಪಾತ್ರಗಳನ್ನು ರಂಗದ ಮೇಲೆ ನಿಲ್ಲಿಸಿದರೆ ಬಯಲಾಟ ಸಿದ್ಧಗೊಳ್ಳುತ್ತದೆ. ಆದ್ದರಿಂದ "ಬಯಲಾಟ ಸಿದ್ಧಗೊಳ್ಳುವುದರಲ್ಲಿ ನೇರವಾಗಿ ಭಾಗವಹಿಸಿ ಅದರ ಮೇಲೆ ತಮ್ಮ ಪ್ರಭಾವ ಮುದ್ರೆಯನ್ನು ಬಲವಾಗಿ ಒತ್ತಿದವರೆಂದರೆ ಈ ಭಾಗವತರೆಂದು ಧಾರಾಳವಾಗಿ ಹೇಳಬಹುದು."[25] ಈ ಭಾಗವತರು ಹೇಳುವ ಕಥೆಗಳನ್ನಾಧರಿಸಿ ಆರಂಭದ ಬಯಲಾಟಗಳು

ರಚನೆಗೊಂಡಿರುವುದರಿಂದ ಅವುಗಳಿಗೆ 'ಭಾಗವತರಾಟ' ಎಂದು ಹೆಸರು ಬಂದಿದೆ. ಈ ಕಾರಣದಿಂದಲೇ ಬಯಲಾಟದ ಸೂತ್ರಧಾರನಿಗೆ 'ಭಾಗವತ'ನೆಂದು ಹೆಸರು.

ಕನ್ನಡ ಬಯಲಾಟದ ನಿರ್ಮಾಣದಲ್ಲಿ ಪಗರಣವು ಬಯಲಾಟಕ್ಕೆ ಪರಿಸರದ ಬೆಂಬಲವನ್ನು ಒದಗಿಸಿಕೊಟ್ಟಿದ್ದರೆ, ಕಲಾಪ್ರಕಾರಗಳು ಒಂದಲ್ಲೊಂದು ರೀತಿಯಲ್ಲಿ ಪ್ರಭಾವ, ಪ್ರೇರಣೆ, ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ. ಕೆಲವು ಕಲೆಗಳ ಪ್ರಭಾವವನ್ನು ಬಯಲಾಟದಲ್ಲಿ ಬೆರಳಿಟ್ಟು ತೋರಿಸುವ ಮಟ್ಟಿಗಾಗಿದೆ. ಮತ್ತೆ ಕೆಲವು ಕಲೆಗಳ ಪ್ರಭಾವ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಆಗಿರುವುದು ಸ್ಪಷ್ಟವಾಗುತ್ತದೆ. ಒಂದು ರೀತಿಯಲ್ಲಿ ಸಮ್ಮಿಶ್ರ ಕಲೆಯಾಗಿರುವ ಬಯಲಾಟದಲ್ಲಿ ಇಂಥವರ ಪಾತ್ರ ಇಷ್ಟೇ ಪ್ರಮಾಣದ್ದು ಎಂದು ಗೆರೆ ಎಳೆದು ತೋರಿಸುವುದು ಕಷ್ಟದ ಮಾತು. ಅದರಲ್ಲೂ ಮೇಲಿನೆಲ್ಲ ಅಂಶಗಳನ್ನು ಗಮನಿಸಿದಾಗ ಬಯಲಾಟದ ಮೇಲೆ ಉಳಿದವರಿಗಿಂತ ಭಾಗವತರ ಪ್ರಭಾವ ನೇರವಾಗಿ ಆಗಿರುವುದು ಸ್ಪಷ್ಟವಾಗುತ್ತದೆ.

## ಅಡಿಟಿಪ್ಪಣಿ

1. ಕನ್ನಡ ರಂಗಭೂಮಿ : ಅಂದು–ಇಂದು, ವಿವಿಧ ಲೇಖಕರು, ಪುಟ– 6
2. ಪಾಶ್ಚಾತ್ಯ ಗಂಭೀರ ನಾಟಕಗಳು, ಎಸ್.ವಿ.ರಂಗಣ್ಣ, ಪುಟ – 37
3. ಜಾನಪದ ಸಾಹಿತ್ಯ ದರ್ಶನ ಭಾಗ–3, ಎಂ.ಎಸ್. ಸುಂಕಾಪುರ, ಪುಟ–119
4. ಕನ್ನಡ ರಂಗಭೂಮಿ ಅಂದು–ಇಂದು, ಪುಟ–3
5. ಅದೇ ಪುಟ – 6
6. ಉತ್ತರ ಕರ್ನಾಟಕದ ಬಯಲಾಟಗಳು, ಬಿ.ಎಂ.ಮಲಶೆಟ್ಟಿ, ಪುಟ–53
7. ಕನ್ನಡ ಜಾನಪದ ಸಾಹಿತ್ಯ ಡಾ, ಬೆಟಗೇರಿ ಕೃಷ್ಣಶರ್ಮ ಪುಟ–3
8. ಉತ್ತರ ಕರ್ನಾಟಕದ ಬಯಲಾಟಗಳು, ಪುಟ–54
9. ಅದೇ ಪುಟ – 55
10. ಅದೇ ಪುಟ – 56
11. ಕರ್ನಾಟಕದ ಪರಂಪರೆ ಸಂಪುಟ–1, ಪುಟ 578

ISSN : 3048-7137

12. ಕುಮಾರವ್ಯಾಸ ಭಾರತ ಕರ್ಣಪರ್ವ, ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, 24.3
13. ಉತ್ತರ ಕರ್ನಾಟಕದ ಬಯಲಾಟಗಳು, ಪುಟ–57
14. ಅದೇ, ಪುಟ – 57
15. ಅದೇ, ಪುಟ – 61
16. ಅದೇ, ಪುಟ – 57
17. ಕನ್ನಡ ಜಾನಪದ ಸಾಹಿತ್ಯ, ಡಾ. ಬೆಟಗೇರಿ ಕೃಷ್ಣಶರ್ಮ ಪುಟ– 75
18. ಕವಿರಾಜಮಾರ್ಗ ಎಂ.ವಿ. ಸೀತಾರಾಮಯ್ಯ ಸಂ. ಪುಟ–68
19. ಧರ್ಮಾಮೃತ, ಸಂ. ಡಾ.ಆರ್. ಶಾಮಾಶಾಸ್ತ್ರೀ. ಪುಟ–103
20. ಉತ್ತರ ಕರ್ನಾಟಕದ ಬಯಲಾಟಗಳು, ಪುಟ– 66
21. ಅದೇ, ಪುಟ – 68
22. ಕನ್ನಡ ಜಾನಪದ ಸಾಹಿತ್ಯ, ಪುಟ– 73
23. ಉ. ಕ ಬ. ಪುಟ– 79
24. ಅದೇ, ಪುಟ – 78
25. ಅದೇ, ಪುಟ – 80

## ಪರಾಮರ್ಶನ ಗ್ರಂಥಗಳು


1. ಬಯಲಾಟಗಳಲ್ಲಿ ಕಲ್ಯಾಣ ಪ್ರಸಂಗಗಳು, ಮೂಗವ್ವ ಹಂದೇರ ಕರ್ನಾಟಕ ವಿ.ವಿ. ಧಾರವಾಡ, 2006
2. ಬಯಲಾಟಗಳ ಕಥೆಗಳು : ಸಾಂಸ್ಕೃತಿಕ ಅಧ್ಯಯನ, ಎಚ್.ಆಯ್ ತಿಮ್ಮಾಪೂರ ಕರ್ನಾಟಕ ವಿ.ವಿ. ಧಾರವಾಡ,1999
3. ಉತ್ತರ ಕರ್ನಾಟಕದ ಬಯಲಾಟಗಳು, ಬಿ.ಎಂ. ಮಲಶೆಟ್ಟಿ, ಕರ್ನಾಟಕ ವಿ.ವಿ. ಧಾರವಾಡ,1979
4. ಬಯಲಾಟಗಳಲ್ಲಿ ಮಹಾಭಾರತದ ವಸ್ತುವಿನ್ಯಾಸ, ಶಿವಶರಣರ್ ಎಂ.ಸಿ. ಕರ್ನಾಟಕ ವಿ.ವಿ. ಧಾರವಾಡ, 2010
5. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ. ಚಿದಾನಂದಮೂರ್ತಿ, ಸ್ವಪ್ನ ಬುಕ್ ಹೌಸ್, 1966

6. ಕನ್ನಡ ಜಾನಪದ ಸಾಹಿತ್ಯ, ಡಾ. ಬೆಟಗೇರಿ ಕೃಷ್ಣಶರ್ಮ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ, 1986
7. ಕವಿರಾಜಮಾರ್ಗ, ಸಂ. ಎಂ.ವಿ. ಸೀತಾರಾಮಯ್ಯ, ಕರ್ನಾಟಕ ಸಂಘ, ಸರಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಬೆಂಗಳೂರು, 1968
8. ಕನ್ನಡ ರಂಗಭೂಮಿ ಅಂದು ಇಂದು, ವಿವಿಧ ಲೇಖಕರು, ಕರ್ನಾಟಕ ವಿ.ವಿ. ಧಾರವಾಡ, 1974
9. ಪಾಶ್ಚಾತ್ಯ ಗಂಭೀರ ನಾಟಕಗಳು, ಎಸ್.ವಿ. ರಂಗಣ್ಣ, ಪ್ರಸಾರಂಗ ಮೈಸೂರು ವಿ.ವಿ, 1970
10. ಕುಮಾರವ್ಯಾಸ ಭಾರತ – ಸಂ. ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ ಪ್ರಸಾರಂಗ ಮೈಸೂರು ವಿ.ವಿ, 1974
11. ಜಾನಪದ ಸಾಹಿತ್ಯ ದರ್ಶನ ಭಾಗ–2, ಸಂ. ಡಾ.ಎಂ.ಎಸ್. ಸುಂಕಾಪುರ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿ.ವಿ. ಧಾರವಾಡ, 1976
12. ಕರ್ನಾಟಕದ ಪರಂಪರೆ ಸಂಪುಟ – 1 ಮತ್ತು 3, ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ ಮೈಸೂರು ಸರಕಾರ, 1970
13. ಧರ್ಮಾಮೃತ ಎರಡು, ಸಂ. ಡಾ.ಆರ್.ಶಾಮಾಶಾಸ್ತ್ರೀ ಒರಿಯೆಂಟಲ್ ಲೈಬ್ರರಿ ಪ್ರಕಾಶನ ಮೈಸೂರು ವಿ.ವಿ. ಮೈಸೂರು, 1924.